

ಸಿಡ್ನಿ ಒಪೆರಾ ಹೌಸ್‌ನಲ್ಲಿ ಅಂದು ಎಲ್ಲಾ ಬಿಚ್ಚಮ್ಮ, ಬಿಚ್ಚಪ್ಪಗಳೇ. ದಾಖಲೆ ನಿರ್ಮಿಸಲು ಹೊರಟ ಮಂದಿಯ ಮುಖ ಹೂವಿನಂತೆ ಅರಳುವ ಬದಲು ಇದ್ದಿಲಿನಂತೆ ಕಪ್ಪಾಯ್ತಂತೆ. ಆಫ್ರಿಕಾದಲ್ಲಿ 287 ಮಂದಿ ಹೀಗೆ ಬಯಲಲ್ಲೇ ಬೆತ್ತಲಾಗಿ ದಾಖಲೆ ಬಾರಿಸಿರುವಾಗ ಇಲ್ಲಿ ಜನ ಬೆಂಬಲವಿಲ್ಲದೇ ಈಜುಡುಗೆ ಸುಂದರ- ಸುಂದರಿಯರ ಸಭೆ ಅರ್ಧಕ್ಕೇ ಬರ್ಖಾಸ್ತು.

ನವೆಂಬರ್ 12 ಅಂದರೆ ವಿಶ್ವ ಗಿನ್ನೆಸ್ ದಾಖಲೆ ದಿನ. ಜಗತ್ತಿನ ಜನಕ್ಕೆಲ್ಲಾ ದಾಖಲೆಯಲ್ಲಿ ಉರುಳಾಡುವ ಉಮೇದು. ಲಂಡನ್ನಿನ ಮಂಜಿತ್ ಕೂದಲಿನಿಂದ ಡಬಲ್ ಡೆಕ್ಕರ್ ಬಸ್ ಎಳೆದು ಹಾಕಿದ. ಬೆಂಗಳೂರಲ್ಲಿ ಡೀಸೆಲ್‌ನಿಂದಲೂ ಓಡದ ಈ ಡಬಲ್ ಡೆಕ್ಕರ್‌ಗೆ ಮಂಜಿತ್‌ನನ್ನು ಕರೆಸಿದರೆ ಹೇಗೆ?




ಇಂಗ್ಲೆಂಡ್‌ನ ಪೊಲೀಸರು ಕಳ್ಳನೊಬ್ಬನನ್ನು ಹುಡುಕಲು ಸ್ಥಳೀಯ ಪತ್ರಿಕೆಯಲ್ಲಿ ಆತನ ಭಾವಚಿತ್ರ ಪ್ರಕಟಿಸಿದರು. ಕಳ್ಳನಿಗೆ ಆ ಚಿತ್ರ ಪಸಂದ್ ಆಗಲಿಲ್ಲ. ಅದಕ್ಕೇ ಪೊಲೀಸ್ ವ್ಯಾನ್ ಮುಂದೆಯೇ ಗತ್ತಾಗಿ ನಿಂತು ಫೋಟೊ ತೆಗೆಸಿ ಪತ್ರಿಕೆಗೆ ಕಳಿಸಿದ. ಪತ್ರಿಕೆಯೂ ಪ್ರಕಟಿಸಿತು. ಖುಷ್ ಆದ ಪೊಲೀಸರು ಭಾವಚಿತ್ರ ಎಲ್ಲಿಂದ ಬಂದಿದೆ ಎಂದು ಪತ್ತೆ ಹಚ್ಚಿ ಕಳ್ಳನನ್ನು ಈಗ ಕಂಬಿಯ ಹಿಂದಿನಿಂದ ಫೋಟೊ ತೆಗೆಸಿಕೋ ಎಂದು ಕಳಿಸಿದ್ದಾರಂತೆ. ಜೊತೆಗೆ 'ಮಾದರಿ ಕಳ್ಳ' ಎಂಬ ಸರ್ಟಿಫಿಕೇಟ್ ಬೇರೆ!

ಲಂಡನ್ನಿನ ಯುವತಿ ಕ್ಯಾರೋಲಿನ್ ಕೋರ್ಟ್‌ನಲ್ಲಿ ಕೇಸೊಂದರಲ್ಲಿ ಸೋತಿದ್ದಾಳೆ. ಇನ್ನು ಮುಂದೆ ಆಕೆ ಬಾಯ್ಮುಚ್ಚಿ ಕೊಂಡಿರಬೇಕು. ಛೆ ಎಂಥ ಶಿಕ್ಷೆ! ಹಗಲಲ್ಲ, ರಾತ್ರಿ ಮಾತ್ರ. ಸ್ನೇಹಿತನ ಜೊತೆ ಪ್ರೀತಿ ಮಾಡುವಾಗ ಆಕೆ ಮಾಡುತ್ತಿದ್ದ ಶಬ್ದ ಯಾರೋ ಕೊಲೆಯಾಗುವಾಗ ಹೊರಡಿಸುವ ಕೂಗಿನ ಥರ ಇರುತ್ತಿತ್ತೆಂದು ನೆರೆಯವರು, ರಸ್ತೆಯಲ್ಲಿ ಓಡಾಡುವವರು ದೂರು ನೀಡಿದ ಮೇಲೆ ಕೋರ್ಟ್ ಆಕೆಗೆ ರಾತ್ರಿ ಬಾಯಿ ಬಂದ್ ಎಂದು ಆದೇಶಿಸಿದೆಯಂತೆ.

ಲೆಬನಾನ್ ದೇಶದ ನಬಿಲ್ ಕರಮ್ ಬರೋಬ್ಬರಿ 22,222 ಕಾರುಗಳ ಒಡೆಯ. ದಾಖಲೆಯ ಪತ್ರವೂ ಜೊತೆಯಲ್ಲಿದೆ. ಇಷ್ಟೆಲ್ಲ ಕಾರುಗಳನ್ನು ಖರೀದಿ ಮಾಡಿದವನ ಬಳಿ ಹಣ ಎಷ್ಟಿರಬಹುದು? ಕರಮ್‌ನ ಕರ್ಮ. ಎಲ್ಲಾ ಹಣವನ್ನೂ ಕಾರು ಖರೀದಿಗೇ ವ್ಯಯಿಸಿಬಿಟ್ಟಿದಾನೆ. ಅದೂ ಆಟಿಕೆ ಕಾರುಗಳು. ಬಂದವರಿಗೆ ಹೆಮ್ಮೆಯಿಂದ ಐದು ಬಾರಿ ಟು. ಟು.. ಎನ್ನುತ್ತ ನಿಲ್ಲುವುದರ ಮುಂದೆ ಖಾಲಿ ಜೇಬು ಮರೆತುಹೋಗುತ್ತಂತೆ.



ಭುವನೇಶ್ವರ ಸಮೀಪದ ಕೇಂದ್ರಪಾಡಾದಲ್ಲಿ ಕಂಡ ಈ ಕೂರ್ಮಾವತಾರಿಗೆ ಪೂಜೆಯ ಮೇಲೆ ಪೂಜೆ. ಜಗನ್ನಾಥನ ಅವತಾರವೆಂದು ಜನ ಮುಗಿಬಿದ್ದು ಕೈ ಮುಗಿದರು. ಬಡಪಾಯಿ ಆಮೆ ಭಕ್ತರಿಂದ ಪಾರಾಗಲು ಈಗ ಮುಂದಿನ ಅವತಾರದ ದಾರಿ ಹುಡುಕುತ್ತಿದೆ.

ಬ್ರಿಟನ್ನಿನಲ್ಲಿ ಕುರೂಪಿಗಳು ತುಂಬಿ ತುಳುಕುತ್ತಿದ್ದಾರಾ ಅಥವಾ ಸುಂದರ/ ಸುಂದರಿಯರಿಗೆ ಬರವಾ? 'ಚೆಂದ ಇದ್ದವರು ಮಾತ್ರ ಅರ್ಜಿ ಹಾಕಿಕೊಳ್ಳಿ' ಎಂಬ ಡೇಟಿಂಗ್ ವೆಬ್‌ಸೈಟ್‌ಗೆ ಅರ್ಜಿ ಹಾಕಿಕೊಂಡ ಮೂವತ್ತು ಮಂದಿಯಲ್ಲಿ ನಾಲ್ವರು ಮಾತ್ರ ಆಯ್ಕೆಯಾಗಿದ್ದಾರಂತೆ. 65 ಮಂದಿ ಸ್ವೀಡನ್ನಿನವರು ಆಯ್ಕೆಯಾಗಿದ್ದು ನಂಬರ್ ಟೂ ಸ್ಥಾನ ನಾರ್ವೆಯವರದ್ದು. ಆದರೆ ಅಲ್ಲಿ ಆಯ್ಕೆ ಮಾಡಿದವರು ಮಾತ್ರ ಆಯ್ಕೆಯಾಗದ ಮಂದಿಯಂತೆ.



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619, Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65